2. ವಿಷಯ : ಹಾದಿಕೆರೆ ಗ್ರಾಮ, ತರೀಕೆರೆ ತಾಲ್ಲೂಕು ಅರಣ್ಯಾಧಿಕಾರಿಗಳಿಂದ ರೇವಣ್ಣ ಎಂಬ ರೈತನ ಮನೆ ಮೇಲೆ ದಾಳಿ ನಡೆಸಿ ಮಹಿಳೆಯರು ಮತ್ತು ಮಕ್ಕಳ ಮೇಲೆ ಹಲ್ಲೆ ಮಾಡಿ ದೌರ್ಜನ್ಯ ನಡೆಸಿರುವುದರ ಬಗ್ಗೆ.

*****

ಶ್ರೀ ಸಿ.ಟಿ. ರವಿ (ಚಿಕ್ಕಮಗಳೂರು):– ಮಾನ್ಯ ಅಧ್ಯಕ್ಷರೆ, ತರೀಕೆರೆ ತಾಲ್ಲೂಕು ಅರಣ್ಯಾಧಿಕಾರಿಗಳಿಂದ ರೇವಣ್ಣ ಎಂಬ ರೈತನ ಮೇಲೆ ದೌರ್ಜನ್ಯ ನಡೆಸಿರುವುದರ ಬಗ್ಗೆ ಕೇಳುತ್ತಿದ್ದೇನೆ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಸಹಕಾರ ಸಚಿವರು) (ಅರಣ್ಯ ಸಚಿವರ ಪರವಾಗಿ):– ಚೆನ್ನಗಿರಿ ವಲಯದ ಅರಣ್ಯ ಮೊಕದ್ದಮೆ ಸಂಖ್ಯೆ: 7/2015–16, ದಿನಂಕ: 01.07.2015 ರಲ್ಲಿ 3 ಸಾಗುವಾನಿ ನಾಟಾ ತುಂಡುಗಳನ್ನು ಕುಕ್ವಾಡ ಉಬ್ರಾಣಿ, ಮೀಸಲು ಅರಣ್ಯದ ಬಂಡಿಗುಡ್ಡ ಶಾಖೆಯಲ್ಲಿ ಅಕ್ರಮವಾಗಿ ಕಡಿತಲೆ ಮಾಡಿ ಸಾಗಿಸುತ್ತಿರುವಾಗ್ಗೆ ಎ1 ಆರೋಪಿ ಶ್ರೀ ಲಕ್ಷ್ಮಣ ಬಿನ್ ವೆಂಕಟೇಶಪ್ಪ, ಸುಮಾರು 19 ವರ್ಷ ಪ್ರಾಯರಾಗಿ ಬಸವನಹಳ್ಳಿ ಗ್ರಾಮ ವಾಸಿ ಇವರನ್ನು ದಸ್ತಗಿರಿ ಮಾಡಿ 3 ಸಾಗುವಾನಿ ತುಂಡುಗಳನ್ನು ಅಮಾನತ್ತು ಪಡಿಸಿಕೊಳ್ಳಲಾಗಿರುತ್ತದೆ. ತಪ್ಪಿಸಿಕೊಂಡ ಇತರೆ 6(ಆರು) ಜನ ಆರೋಪಿತರನ್ನು ಹಾಗೂ ಉಳಿದ ಸಾಗುವಾನಿ ನಾಟಾವನ್ನು ಅಮಾನತ್ತು ಪಡಿಸಿಕೊಳ್ಳುವ ಸಲುವಾಗಿ ಎ1 ಆರೋಪಿತನ ಹೇಳಿಕೆಯಂತೆ, ದಿನಾಂಕ: 02.07.2015 ರಂದು ಬೆಳಿಗ್ಗೆ ಸುಮಾರು 7–00 ಗಂಟೆ ಸಮಯದಲ್ಲಿ ಎ2 ಆರೋಪಿ ಶ್ರೀ ರೇವಣ್ಣ, ಆಲಿಯಾಸ್ ಸಾಟಿ ರೇವಣ್ಣ, ಬಿನ್ ನಾಗಣ್ಣ ಇವರನ್ನು ಹಾದಿಕೆರೆ ಗ್ರಾಮದ ಅವರ ಮನೆಯ ಹತ್ತಿರ ದಸ್ತಗಿರಿ ಮಾಡಿಕೊಂಡು, ಉಳಿದ ನಾಟಾ ತುಂಡುಗಳನ್ನು ಅಮಾನತ್ತು ಪಡಿಸಲು ಹಾಗೂ ಉಳಿದ ಆರೋಪಿತರನ್ನು ಬಂಧಿಸಲು ಪ್ರಯತ್ನದಲ್ಲಿದ್ದಾಗ ಸದರಿ ವಿಚಾರವನ್ನು ತಿಳಿಸುವಾಗ ತಪ್ಪಿಸಿಕೊಂಡಿದ್ದ ಈ ಪ್ರಕರಣದ ಉಳಿದ ಆರೋಪಿತರು ಜನರನ್ನು ಗುಂಪು ಕಟ್ಟಿಕೊಂಡು ಬಂದು ಅರಣ್ಯ ಸಿಬ್ಬಂದಿಗಳ

ಮೇಲೆ ಹಲ್ಲೆ ಮಾಡಿ ಕರ್ತವ್ಯಕ್ಕೆ ಅಡಚಣೆ ಉಂಟು ಮಾಡಿರುತ್ತಾರೆ. ಅಷ್ಟರಲ್ಲಿ ತರೀಕೆರೆ ಅರಕ್ಷಕರಿಗೆ ವಿಚಾರ ತಿಳಿಸಿದ್ದರಿಂದ ಅವರು ಸಹ ಸ್ಥಳಕ್ಕೆ ಆಗಮಿಸಿರುತ್ತಾರೆ. ಅವರ ಸಮಕ್ಷಮದಲ್ಲೂ ಸಹ ತಪ್ಪಿಸಿಕೊಂಡ ಆರೋಪಿತರು ಹಾಗೂ ಗ್ರಾಮಸ್ಥರು ಸಿಬ್ಬಂದಿಗಳ ಮೇಲೆ ಹಲ್ಲೆ ಮಾಡಿ ಕರ್ತವ್ಯಕ್ಕೆ ಅಡಚಣೆ ಉಂಟು ಮಾಡಿರುತ್ತಾರೆ. ಈ ಬಗ್ಗೆ ಆರಕ್ಷಕ ಉಪ ನಿರೀಕ್ಷಕರು, ತರೀಕೆರೆ ಪೊಲೀಸ್ ಠಾಣೆ ಇವರಲ್ಲಿ ದೂರು ನೀಡಿದ್ದು, 17 ಜನರ ಮೇಲೆ ದೂರು ದಾಖಲಾಗಿರುತ್ತದೆ. ಸದರಿ ದಾಖಲಾದ ದೂರಿನ ಪ್ರಥಮ ವರ್ತಮಾನ ವರದಿ ಸಂಖ್ಯೆ: 0208/2015 ಪ್ರವವ, ದಿನಾಂಕ: 02.07.2015 ಆಗಿರುತ್ತದೆ.

ಸದರಿ ರೇವಣ್ಣ ಎಂಬುವವರ ಮೇಲೆ ಹಾಗೂ ಮಹಿಳೆ ಮತ್ತು ಮಕ್ಕಳ ಮೇಲೆ ಅರಣ್ಯ ಇಲಾಖೆ ಸಿಬ್ಬಂದಿಯು ಯಾವುದೇ ದೌರ್ಜನ್ಯ ಎಸಗಿರುವುದಿಲ್ಲ.

ಈ ಪ್ರಕರಣದಲ್ಲಿ ದಸ್ತಗಿರಿಯಾದ ಎ1 ಆರೋಪಿತನು ತನ್ನ ತಪ್ಪನ್ನು ಒಪ್ಪಿಕೊಂಡು ಸದರಿ ಪ್ರಕರಣವನ್ನು ಇಲಾಖಾ ಮುಖಾಂತರ ಇತ್ಯರ್ಥಪಡಿಸಿಕೊಳ್ಳಲು ಕೋರಿದ್ದರಿಂದ, ಎ1 ಆರೋಪಿತರನ್ನು ದಿನಾಂಕ: 02.07.2015 ರಂದು ಬೇಲ್ ಬಾಂಡ್ ಮೇಲೆ ಬಿಡುಗಡೆ ಮಾಡಲಾಗಿರುತ್ತದೆ.

ಶ್ರೀ ಸಿ.ಟಿ. ರವಿ:– ಮಾನ್ಯ ಸಚಿವರೆ, ತಾವು ಉತ್ತರವನ್ನು ಕಳುಹಿಸಿದ್ದೀರಿ. ಸುಳ್ಳು ಉತ್ತರವನ್ನು ಕಳುಹಿಸಿದ್ದೀರಿ. ಅವರಿಂದ ಆರೋಪಿಗಳನ್ನು ದಸ್ತಗಿರಿ ಮಾಡಿರುವುದೂ ಸುಳ್ಳು. ಯಾವುದೇ ನಾಟಾ ವಶಪಡಿಸಿಕೊಂಡಿರುವುದು ಸುಳ್ಳು. ಅವರು ಬಂದಿರುವುದು ಚೆನ್ನಗಿರಿ ತಾಲೂಕಿನವರು. ಇದು ನಡೆದಿರುವುದು ತರೀಕೆರೆ ಚಿಕ್ಕಮಗಳೂರು ಜಿಲ್ಲೆಯಲ್ಲಿ. ಅವರು ಈ ಜಿಲ್ಲೆಗೆ ಬಂದು ಮಾಡಬೇಕಾದರೆ ಈ ಜಿಲ್ಲೆಯ ವಾರೆಂಟ್ ತೆಗೆದುಕೊಂಡು ಬರಬೇಕು ಅಥವಾ ಸರ್ಚ್ ವಾರೆಂಟ್ ತೆಗೆದುಕೊಂಡು permission ತೆಗೆದುಕೊಂಡು ಬರಬೇಕಾಗುತ್ತದೆ. ಆ ತರಹ ಏನೂ ಮಾಡಿಲ್ಲ. ಬೆಳಗಿನ ಜಾವ 4 ಗಂಟೆಯಲ್ಲಿ ಅಕ್ರಮವಾಗಿ ಅವರ

ಮನೆಗೆ ನುಗ್ಗಿದಾಗ ಇಡೀ ಗ್ರಾಮಸ್ಥರು ಪ್ರತಿಭಟಿಸಿ ಇದರ ವಿರುದ್ಧ ಅರಣ್ಯ ಇಲಾಖೆಯವರನ್ನು ದಿಗ್ಬಂಧನಕ್ಕೆ ಹಾಕಿ ಗ್ರಾಮಸ್ಥರು ಪೊಲೀಸರಿಗೆ inform ಮಾಡಿದ್ದಾರೆ. ಆಗ ಅವರು ಅಲ್ಲಿ ನಮ್ಮಿಂದ ತಪ್ಪು ಆಗಿದೆ, ತಪ್ಪು ಮಾಹಿತಿ ಮೇಲೆ ಬಂದೆವು ಎಂದು ತಮ್ಮ ಮುಖ ಉಳಿಸಿಕೊಳ್ಳುವುದಕ್ಕೆ ಈ ರೀತಿ ನಿಮ್ಮಿಂದ ಸುಳ್ಳು ಹೇಳಿಕೆಯನ್ನು ಕೊಡಿಸಿದ್ದಾರೆ.

ಅಧ್ಯಕ್ಷರು:– ಈಗ ಏನು ಮಾಡಬೇಕು ಅದನ್ನು ಹೇಳಿ.

ಶ್ರೀ ಸಿ.ಟಿ. ರವಿ:– ಮಾನ್ಯ ಅಧ್ಯಕ್ಷರೆ, ಇಡೀ ವರದಿಯೇ ಸುಳ್ಳು. ಅಲ್ಲಿರುವಂಥ ಸಾಮಾನ್ಯ ಜನ . .

ಅಧ್ಯಕ್ಷರು:– ಮಾನ್ಯ ಸಚಿವರೇ ಎಸ್.ಪಿ. ಗೆ ಹೇಳಿ ಹೊಸದಾಗಿ ತರಿಸಿ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್:– ಮಾನ್ಯ ಅಧ್ಯಕ್ಷರೆ, ಮೊದಲ ಆರೋಪಿ ಏನಿದ್ದಾನೆ, ಅವನು ತಾವು ಏನು ಪ್ರಸ್ತಾಪ ಮಾಡುತ್ತಿದ್ದೀರಿ ರೇವಣ್ಣ ನನ್ನ ಜೊತೆ ಇದ್ದ ಎಂದು, ಅವನೇ ಜೊತೆಯಲ್ಲಿ ಅವರ ಮನೆಗೆ ಕರೆದುಕೊಂಡು ಹೋಗಿದ್ದರಿಂದ ಅರಣ್ಯ ಇಲಾಖೆಯವರು ಅದನ್ನು ತಪಾಸಣೆ ಮಾಡುವಾಗ ಅವನನ್ನು ಬಂಧನಕ್ಕೆ ಪ್ರಯತ್ನ ಮಾಡಿದ್ದಾರೆ.

ಶ್ರೀ ಸಿ.ಟಿ. ರವಿ:– ಮಾನ್ಯ ಸಚಿವರೆ, ನಿಮಗೆ ಸಾಗುವಾನಿ ಕಡಿತದ ಪ್ರಕರಣದಲ್ಲಿ ಇಲಾಖೆಯ ಮುಖಾಂತರ ಇತ್ಯರ್ಥ ಮಾಡಿಕೊಳ್ಳುವುದಕ್ಕೆ ಅವಕಾಶ ಇದೆಯೇ? As per the Forest Act ಸಾಗುವಾನಿಯನ್ನು ಅಕ್ರಮವಾಗಿ ತಡೆದರೆ, ನೀವು ಕೊಟ್ಟಿರುವ ಉತ್ತರದಲ್ಲಿ ಕೊನೆಯ ಲೈನ್ ಅನು ಓದಿ. ಈ ಪ್ರಕರಣದಲ್ಲಿ ದಸ್ತಗಿರಿಯಾದ ಎ1 ಆರೋಪಿತನು ತನ್ನ ತಪ್ಪನ್ನು ಒಪ್ಪಿಕೊಂಡು . . .

ಶ್ರೀ ಹೆಚ್.ಎಸ್. ಮಹದೇವಪ್ರಸಾದ್:– ಮಾನ್ಯ ಅಧ್ಯಕ್ಷರೆ, ಕೇಸ್ ಅನ್ನು ಕ್ಲೋಸ್ ಮಾಡಿಲ್ಲ. ಬೇಲ್ ಮೇಲೆ ಬಾಂಡ್ ತೆಗೆದುಕೊಂಡು 19 ವರ್ಷದ ಹುಡುಗ ಎಂದು ಎ ಆರೋಪಿಗೆ ಬಿಡುಗಡೆ ಮಾಡಿದ್ದಾರೆ.

ಅಧ್ಯಕ್ಷರು:– ಇದು ಚರ್ಚೆಗೆ ಬರುವುದಿಲ್ಲ.

ಶ್ರೀ ಸಿ.ಟಿ. ರವಿ:– ಮಾನ್ಯ ಅಧ್ಯಕ್ಷರೆ, ಚರ್ಚೆ ಅಲ್ಲ. ಕ್ರಿಮಿನಲ್ offence ಮಾಡಿದವನು ಇಲಾಖೆಯ ಮುಖಾಂತರ ಇತ್ಯರ್ಥಪಡಿಸಿಕೊಳ್ಳುವುದಕೆ ನಿಮ್ಮ Forest Act ನಲ್ಲಿ ಅವಕಾಶ ಇದೆಯೇ?

ಶ್ರೀ ಹೆಚ್.ಎಸ್. ಮಹದೇವಪ್ರಸಾದ್:– ಮಾನ್ಯ ಅಧ್ಯಕ್ಷರೆ, ಅದು ಇಲಾಖೆಯ ಮುಖಾಂತರ ಇತ್ಯರ್ಥಪಡಿಸಿಕೊಳ್ಳುವುದಕ್ಕೆ ಅಲ್ಲ. ಇಲಾಖೆಯ ಮುಖಾಂತರ ಅವರು ಎ1 ಆರೋಪಿಗೆ ಬಾಂಡ್ ಪೇಪರ್ ಮೇಲೆ ಬೇಲ್ ಕೊಟ್ಟು ಆತನನ್ನು ಬಿಡುಗಡೆಗೊಳಿಸಿದ್ದಾರೆ. ಅಷ್ಟೇ ಹೇಳಿರುವುದು.

ಶ್ರೀ ಸಿ.ಟಿ. ರವಿ:– ಮಾನ್ಯ ಸಚಿವರೆ, ಕೊನೆಯ ಲೈನ್ ಅನ್ನು ಓದಿ. ಪೂರ್ಣ ಓದುವುದಕ್ಕೆ ಹೋಗಬೇಡಿ.

ಅಧ್ಯಕ್ಷರು:– ಮಾನ್ಯ ಸಚಿವರೆ, ಅವರು ಏನು ಹೇಳುತ್ತಿದ್ದಾರೆ ಅದನ್ನು ಪರಿಶೀಲನೆ ಮಾಡಿ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್:– ಮಾನ್ಯ ಅಧ್ಯಕ್ಷರೆ, ಆಯಿತು. ಅದು ಏನಿದೆ, ಅದನ್ನು ಪರಿಶೀಲನೆ ಮಾಡುತ್ತೇನೆ.

ಅಧ್ಯಕ್ಷರು:– ಮಾನ್ಯ ಯು.ಬಿ. ಬಣಕಾರ್ ರವರೆ ಮಾತನಾಡಿ.

3. ವಿಷಯ : ವಿದ್ಯುತ್ ಅವಘಡದಿಂದ ಮೃತಪಟ್ಟವರಿಗೆ ಹಾಗೂ ಗಾಯಗೊಂಡವರಿಗೆ ಕಾಲಮಿತಿ ಒಳಗೆ ಕೂಡಲೇ ಪರಿಹಾರ ನೀಡುವ ಬಗ್ಗೆ.

*****

ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು):– ಮಾನ್ಯ ಅಧ್ಯಕ್ಷರೆ, ಮಾನ್ಯ ಇಂಧನ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಯಾವುದೇ ಒಂದು ವಿದ್ಯುತ್ ಅವಘಡ ಸಂಭವಿಸಿದ ಸಂದರ್ಭದಲ್ಲಿ ಒಂದು ಕಾಲಮಿತಿಯೊಳಗೆ ಪರಿಹಾರ ಕೊಡುವಂಥ ವ್ಯವಸ್ಥೆ ಆಗಬೇಕು. ಮಾಸೂರು ಗ್ರಾಮದಲ್ಲಿ ಒಂದು ವರ್ಷದಿಂದ ಇವತ್ತಿನವರೆಗೂ ಪರಿಹಾರ ಬಂದಿಲ್ಲ.